SURANA EVENING COLLEGE
LIBRARY
Acc. No. ..........
Date ..........
Bengaluru-60.
No. CA-17, Kengeri Satellite Town

**ಮೊದಲನೇ ಸೆಮಿಸ್ಟರ್ ಬಿ.ಕಾಂ. ಪರೀಕ್ಷೆ, ಜನವರಿ/ಫೆಬ್ರವರಿ 2025**

**(NEP) (Repeaters)**

**ಕನ್ನಡ ಭಾಷಾ ಪತ್ರಿಕೆ – 1**

**ವಾಣಿಜ್ಯ ಕನ್ನಡ – 1**

Time : 2½ Hours

I. **ನಾಲ್ಕು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (**ಎಂಬತ್ತು** ಪದಗಳಿಗೆ ಮೀರದಂತೆ) **(4×5=20)**

1) ಲಿಪಿಗಳೆ ಇಲ್ಲದ ಉಪಭಾಷೆಗಳನ್ನು ಕನ್ನಡ ಹೇಗೆ ಒಳಗೊಳ್ಳಬೇಕು ? ವಿಶ್ಲೇಷಿಸಿ.
2) ಭರತನ ಪ್ರಸಂಗ, ಶಿವಾಜಿ ಪ್ರತಿಮೆಯ ಪ್ರಸಂಗ ಇಂದು ನಮಗೆ ಏನನ್ನು ತಿಳಿಯಪಡಿಸುತ್ತದೆ ?
3) ಗಾಂಧೀಜಿಯವರ ವಸ್ತ್ರದಹನ ಪ್ರಸಂಗದ ಉದ್ದೇಶ ವಿವರಿಸಿ.
4) ದೇವರನ್ನು ಕಾಣುವ ಹಂಬಲದ 'ಝೆನ್' ಕತೆಯನ್ನು ವಿಶ್ಲೇಷಿಸಿ.
5) ಬ್ರೈನ್‌ವಾಶ್, ಲೋಬೋಟಮಿ ಚಿಕಿತ್ಸೆಗಳನ್ನು ಕುರಿತು ಬರೆಯಿರಿ.
6) ಸ್ತ್ರೀ ಶಕ್ತಿ ಯೋಜನೆಯ ಸಾಧಕಗಳನ್ನು ಕುರಿತು ಬರೆಯಿರಿ.

II. **ಎರಡು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **ನೂರಾ ಅರವತ್ತು** ಪದಗಳಿಗೆ ಮೀರದಂತೆ. **(2×10=20)**

1) ಕಾಣಿಕೆ ಪದ್ಯವು ಭಾಷಾ ಬಾಂಧವ್ಯವನ್ನು ಅಭಿವ್ಯಕ್ತಿಸಿರುವ ರೀತಿಯನ್ನು ವಿಶದವಾಗಿ ವಿವರಿಸಿ.
2) ಎಂಟು ರೀಟೈಲ್ ವ್ಯಾಪಾರಗಳನ್ನು ಕುರಿತು ಬರೆಯಿರಿ.
3) ಮೀಸಲಾತಿಯು ಕೇವಲ ರಾಜಕೀಯ ಲಾಬಿಯಾಗಿ ಬದಲಾಗಿರುವುದನ್ನು 'ಸಮಕಾಲೀನ ಸವಾಲುಗಳು' ಪಠ್ಯ ಹೇಗೆ ಅಭಿವ್ಯಕ್ತಿಸಿದೆ ?

III. ಕೆಳಕಂಡ ಪಠ್ಯವನ್ನು **ಮೂರನೇ ಒಂದು** ಭಾಗಕ್ಕೆ ಸಂಕ್ಷೇಪಿಸಿ ಬರೆದು ಸೂಕ್ತ ಶೀರ್ಷಿಕೆ ನೀಡಿ. **(1×3=3)**

ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ನೀತಿಗಳಿಂದ ಉದ್ಯೋಗಗಳು ಹೆಚ್ಚಾಗಿವೆ. ಆದರೆ ಇವು ಎಂತಹ ಉದ್ಯೋಗಗಳು ? ಇವೆಲ್ಲವು ಭದ್ರತೆಗಳಿಲ್ಲದ ಉದ್ಯೋಗಗಳು. ಅಂದರೆ ಮಾಲೀಕರು ಖುಷಿ ಬಂದಾಗ ನೇಮಕ ಮಾಡಿ, ತಮಗೆ ಖುಷಿ ಬಂದಷ್ಟು ಸಂಬಳ ನೀಡಿ, ಖುಷಿ ಬಂದಾಗ ದುಡಿಸಿಕೊಂಡು ಸಾಕೆನ್ನಿಸಿದಾಗ ಮನೆಗೆ ಕಳಿಸುವ ಉದ್ಯೋಗಗಳು. ಇದೇ ರೀತಿಯಲ್ಲಿ ಸರಕಾರದ ವರದಿ ಪ್ರಕಾರ ತೆರಿಗೆ ಸಂಗ್ರಹ ಕೂಡ ಹೆಚ್ಚಾಗಿದೆ. ಆದರೆ ಇದು ಅನುಕೂಲಸ್ಥರು ಕಟ್ಟುವ ನೇರ ತೆರಿಗೆಯಿಂದಾದ ಹೆಚ್ಚಳವಲ್ಲ. ಅದರ ಬದಲು ಬಡವರು ಕಟ್ಟುವ ಪರೋಕ್ಷ ತೆರಿಗೆಯಿಂದ ಆದ ಹೆಚ್ಚಳ. ಬಹುತೇಕ ಶ್ರೀಮಂತ ದೇಶಗಳಲ್ಲಿ ಪರೋಕ್ಷ ತೆರಿಗೆ ಸಂಗ್ರಹ ಅವುಗಳ ಒಟ್ಟು ತೆರಿಗೆ ಸಂಗ್ರಹದ ಅರ್ಧಕ್ಕಿಂತಲೂ ಕಡಿಮೆ ಇದ್ದರೆ ನಮ್ಮಲ್ಲಿ ಪರೋಕ್ಷ ತೆರಿಗೆ ಸಂಗ್ರಹ ನಮ್ಮ ಒಟ್ಟು ತೆರಿಗೆ ಸಂಗ್ರಹದ ಮೂರನೇ ಎರಡರಷ್ಟಿದೆ. ಬಡವರಿಂದ ಸಂಗ್ರಹಿಸಿದ ತೆರಿಗೆಯನ್ನು ಕೃಷಿ ಉದ್ದಿಮೆ ಮೂಲ ಸೌಕರ್ಯಗಳ ಅಭಿವೃದ್ಧಿಗೆ ವಿನಿಯೋಗಿಸಿದಷ್ಟು ಶಿಕ್ಷಣ, ಆರೋಗ್ಯ ಕ್ಷೇತ್ರಗಳ ಅಭಿವೃದ್ಧಿಗೆ ವಿನಿಯೋಗಿಸಿಲ್ಲ. ಶಿಕ್ಷಣ, ಆರೋಗ್ಯ ಕ್ಷೇತ್ರಗಳಲ್ಲಿ ಖಾಸಗಿಯವರದ್ದೇ ಕಾರುಬಾರು.

P.T.O.

IV. ಸಂಕ್ಷೇಪಿಸಿದ್ದ ಬರಹ ಆಧರಿಸಿ ಎರಡು ಪ್ರಶ್ನೆ ರೂಪಿಸಿ. **(2×1=2)**

V. ಇವುಗಳಲ್ಲಿ **ಎರಡು** ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ. **(2×1=2)**

1) ಜವಾಬ್ದಾರಿ
2) ಪ್ರತ್ಯಕ್ಷ
3) ಪರಿಶೀಲಿಸು
4) ಸರಳರೇಖೆ.

VI. ಎನ್.ಎಸ್.ಎಸ್. ತರಬೇತಿ ಕೇಂದ್ರದಲ್ಲಿ ಭಾಗವಹಿಸಲು ಹದಿನೈದು ದಿನದ ಹಾಜರಾತಿ ಮಂಜೂರಾತಿ ಕೋರಿ ಪ್ರಾಂಶುಪಾಲರಿಗೊಂದು ಪತ್ರ ಬರೆಯಿರಿ. **(1×4=4)**

VII. ಇವುಗಳಲ್ಲಿ **ನಾಲ್ಕು** ಪದಗಳಿಗೆ ಅರ್ಥ ಬರೆಯಿರಿ. **(4×1=4)**

1) ಯುಟೋಪಿಯಾ
2) ಅಸಹಕಾರ
3) ಸೂಳ್ನುಡಿ
4) ಹುರುಳು
5) ಕೆಳೆಯ
6) ಬೆರಗು
7) ಪಡುವ
8) ತೆರಪು

VIII. ಇವುಗಳಿಗೆ **ಒಂದೊಂದು** ಸರಿ ಉತ್ತರವನ್ನು ಗುರುತಿಸಿ ಬರೆಯಿರಿ. **ಎಲ್ಲಾ ಐದು** ಪ್ರಶ್ನೆಗಳಿಗೆ ಉತ್ತರಿಸಿ. **(5×1=5)**

1) 'ಲೆಟ್ ಅವರ್ ಚಿಲ್ಡ್ರನ್ ಗೋ' ಕೃತಿಯ ಕರ್ತೃ

a) ಪ್ಯಾಟ್ರಿಕ್
b) ಸ್ಕಿನ್ನರ್
c) ಬೆರಿಯರ್ ಎಲ್ವಿನ್
d) ಜಾನ್ ವಾಟ್ಸನ್

2) 'ಸ್ತ್ರೀ ಶಕ್ತಿ ಯೋಜನೆ'ಯ ಅಜೀವ ಸದಸ್ಯತ್ವ ಶುಲ್ಕ

a) 500 ರೂ.
b) 1,000 ರೂ.
c) 250 ರೂ.
d) 1,500 ರೂ.

3) 'ಗಿಲ್ಡ್' ಎಂದರೆ

a) ಕಸುಬು –ಕೌಶಲ್ಯಾಧಾರಿತ ಶಿಕ್ಷಣ ಕ್ರಮ
b) ಸಂಗೀತ–ನೃತ್ಯ ಶಿಕ್ಷಣ ಕ್ರಮ
c) ಬರಹ–ವಾಕ್–ತರಬೇತಿ
d) ವಿಜ್ಞಾನ–ಸಾಹಿತ್ಯ ಶಿಕ್ಷಣ ಕ್ರಮ

4) ಹಾರ್ಡಿಂಜ್ ದಂಪತಿಗಳ ಭಾವಚಿತ್ರದ ಅನಾವರಣಕ್ಕೆ ಬಂದವರು

a) ರಾಜೇಂದ್ರ ಪ್ರಸಾದ್
b) ಲಾಲ್ ಬಹದ್ದೂರ್ ಶಾಸ್ತ್ರಿ
c) ಮಹಾತ್ಮ ಗಾಂಧಿ
d) ಬಾಲಗಂಗಾಧರ್ ತಿಲಕ್

5) ಮೈಸೂರು ರಾಜರು 'ರಾಜಸೇವಾಸಕ್ತ' ಬಿರುದು ನೀಡಿದ್ದು

a) ತೀ.ನಂ.ಶ್ರೀ.
b) ಬಿ.ಎಂ.ಶ್ರೀ.
c) ಬೇಂದ್ರೆ
d) ಸಾ. ಶಿ. ಮರುಳಯ್ಯ

---